ಅ) ಮನೆಗಳನ್ನು ನಿರ್ಮಿಸಲು ಅವಶ್ಯವಿರುವ ಜಾಗವನ್ನು ಖರೀದಿಸಲಾಗಿದೆಯೇ;

ಇ) ಖರೀದಿಸಿದ್ದಲ್ಲಿ ಮನೆಗಳ ನಿರ್ಮಾಣ ಕಾರ್ಯ ಯಾವಾಗಿನಿಂದ ಪ್ರಾರಂಭಿಸಲಾಗುವುದು;

ಈ) ಒಂದು ವೇಳೆ ಜಮೀನು

ಉ) ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದು ಯಾವಾಗ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು) :

ಅ) ಪಿರಿಯಾಪಟ್ಟಣ ತಾಲ್ಲೂಕು, ಕಸಬ ಹೋಬಳಿ, ಅಬ್ಬೂರು ಗ್ರಾಮದ ಸರ್ವೆ ನಂ 3/2, 5/1, 5/2, ಹಾಗೂ ಇತರೆಯಲ್ಲಿ 13-33 ಎಕರೆ ಜಮೀನನ್ನು ಭೂಸ್ವಾಧೀನದ ಮೂಲಕ ಸಂಗ್ರಹಿಸಲಾಗುತ್ತಿದೆ. 912 ಅರ್ಜಿಗಳು ಮನೆಗಳಿಗಾಗಿ 100 ಅರ್ಜಿಗಳು ನಿವೇಶನಗಳಿಗಾಗಿ ಒಟ್ಟು 1012 (ಒಂದು ಸಾವಿರದ ಹನ್ನೆರಡು) ಅರ್ಜಿಗಳು ಬಂದಿರುತ್ತವೆ.

ಆ) ಜಮೀನನ್ನು ಸಂಗ್ರಹಿಸುವ ಕಾರ್ಯವು ಪ್ರಗತಿಯಲ್ಲಿದೆ.

ಇ) ಜಮೀನನ್ನು ಮಂಡಳಿಯು ಖರೀದಿಸಿದ ನಂತರ ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಈ) ಜಮೀನನ್ನು ಭೂಸ್ವಾಧೀನದ ಮೂಲಕ ಸಂಗ್ರಹಿಸಲು ಕ್ರಮ ತೆಗೆಯಲಾಗಿದೆ.

ಉ) ಮಂಡಳಿಯು ಜಮೀನನ್ನು ಖರೀದಿಸಿದ ನಂತರ ಮನೆಗಳ ನಿರ್ಮಾಣ ಕಾರ್ಯವನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಪಿರಿಯಾಪಟ್ಟಣ ಗೃಹಮಂಡಳಿ ನಿರ್ಮಿಸುವ ಮನೆಗಳಿಗೆ ಬಂದ ಅರ್ಜಿಗಳು

1710 (2073) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣದಲ್ಲಿ ಸಾರ್ವಜನಿಕರಿಗೆ ವಸತಿ ಸಮಸ್ಯೆ ಇದೆಯೆ:

ಆ) ಪಿರಿಯಾಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಮನೆಗಳನ್ನು ಕಟ್ಟಲು ಉದ್ದೇಶಿಸಲಾಗಿದೆಯೇ:

ಇ) ಹಾಗಿದ್ದಲ್ಲಿ, ಎಷ್ಟು ಮನೆಗಳಿಗಾಗಿ ಅರ್ಜಿಗಳು ಬಂದಿವೆ ಹಾಗೂ ಮೊಬಲಗು ಎಷ್ಟು:

ಈ) ಮನೆ ನಿರ್ಮಿಸಲು ಜಮೀನು ಖರೀದಿಸಲಾಗಿದೆಯೆ: ಬಡಾವಣೆ ಕಾರ್ಯ ಆಗಿದೆಯೆ; ಯಾವಾಗ ಮುಗಿಯುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ಹೌದು

ಆ) ಹೌದು

ಇ) ಮನೆಗಳಿಗಾಗಿ 912 ಅರ್ಜಿಗಳು ಬಂದಿವೆ. ಈ ಅರ್ಜಿಗಳಿಂದ ಬಂದ ಮೊಬಲಗು ರೂ. 9,31,725/- ನಿವೇಶನಗಳಿಗಾಗಿ, 100 ಅರ್ಜಿಗಳು ಬಂದಿವೆ. ಇದರಿಂದ ಬಂದ ಮೊಬಲಗು ರೂ. 1,09,140/- ಒಟ್ಟು ರೂ. 10,40,865/- (ಹತ್ತು ಲಕ್ಷದ ನಲವತ್ತು ಸಾವಿರದ ಎಂಟನೂರು ಅರವತ್ತೈದು) ಬಂದಿರುತ್ತದೆ.

ಈ) ಅ) ಹೌದು, ಪಿರಿಯಾಪಟ್ಟಣ ತಾಲ್ಲೂಕು ಅಬ್ಬೂರು ಗ್ರಾಮದ ಸರ್ವೆ ನಂ. 5/1,2,3,4 ಹಾಗೂ ಇತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 13-33 ವಿಸ್ತೀರ್ಣ ಭೂಸ್ವಾಧೀನ ಪ್ರಕ್ರಿಯೆ ನಡೆದಿರುತ್ತದೆ.

ಆ) ಪಿರಿಯಾಪಟ್ಟಣ ತಾಲ್ಲೂಕು ಕಸಬಾ ಹೋಬಳಿ ರಾಜಪುರ ಗ್ರಾಮದ ಸ.ನಂ. 56,57,58 ಇತರೆ ಸರ್ವೆ ನಂಬರ್‌ಗಳಲ್ಲಿ ಒಟ್ಟು 71 ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳಿಗೆ (ಜಿಲ್ಲಾ ಭೂಖರೀದಿ ಸಮಿತಿಯಲ್ಲಿ) ದರ ನಿಗದಿ ಪಡಿಸುವ ಬಗ್ಗೆ ಪ್ರಸ್ತಾವನೆಗೆ ಸಿದ್ದತೆ ನಡೆಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಪ್ರೌಢ ಶಾಲೆಯ ಶಿಕ್ಷಕರ ಕೊರತೆ

1711 (2074) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು; ಈ ಶಾಲೆಗಳ ಪೈಕಿ ಎಷ್ಟು ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇದೆ; ಅವು ಯಾವುವು; ಬಾಕಿ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಎಂದು ಮಾಡಲಾಗುವುದು;

ಆ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳಲ್ಲಿ ಒಟ್ಟು ಎಷ್ಟು ಶಿಕ್ಷಕರ ಹುದ್ದೆ ಖಾಲಿ ಇವೆ? (ಸರ್ಕಾರಿ ಪ್ರೌಢಶಾಲಾವಾರು ವಿವರ ನೀಡುವುದು)

ಇ) ಖಾಲಿ ಇರುವ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು.

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಒಟ್ಟು 16 ಸರ್ಕಾರಿ ಪ್ರೌಢಶಾಲೆಗಳಿರುತ್ತವೆ. ಒಟ್ಟು 13 ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇದೆ.

ಶಾಲೆಗಳ ವಿವರ :-

1) ಸರ್ಕಾರಿ ಪ್ರೌಢಶಾಲೆ ಹೆಲಗನಹಳ್ಳಿ
2) ಪಂಚನಹಳ್ಳಿ
3) ದೊಡ್ಡಬೇಲಾಳು
4) ಹುಣಸವಾಡಿ
5) ಸ.ಬಾಲಕಿಯರ ಪ್ರೌಢಶಾಲೆ, ಪಿರಿಯಾಪಟ್ಟಣ
6) ಸರ್ಕಾರಿ ಪ್ರೌಢಶಾಲೆ, ಭುವನಹಳ್ಳಿ
7) ಕಂಪಲಾಪುರ
8) ಹಾರನಹಳ್ಳಿ
9) ಸ.ಪ.ಪೂ. ಕಾಲೇಜು, ಬೆಟ್ಟದಪುರ
10) ಕಿತ್ತೂರು
11) ಕಣಗಾಲು
12) ರಾವಂದೂರು
13) ಪಿರಿಯಾಪಟ್ಟಣ

ಬಾಕಿ 3 ಶಾಲೆಗಳಾದ

1) ಸರ್ಕಾರಿ ಪ್ರೌಢಶಾಲೆ, ಬೈಲಕುಪ್ಪೆ
2) ಮಾಕೋಡು
3) ಬೆಟ್ಟದ ತುಂಗ